SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 100] ಮಂಗಳವಾರ 11—12—45 [ಬಿಡಿ ಪ್ರತಿ 6 ಪೈ

ವಿವಿಧ ವೃತ್ತ

ಪಾಟ್ನ, ಡಿ 5 — ಜಿಗ್‌ಜದರ್ಲಿಂಡ್ ಕಂಪೆನಿಯ ರೂ. 700 ಸಂಬಳದ ಮುಸ್ಲಿಂ ಅಧಿಕಾರಿಯಾದ ಮಿ ॥ ಮೊಹಿದೀನ್ ಎಂಬುವರು, ಅಲ್ಲಿಯ ತಿಂಗ್ಲೀಷ್ ಅಧಿಕಾರಿಯು ಗಾಂಧೀಜೀ ಜಿನ್ನಾ ಮುಂತಾದ ಭಾರತ ಮುಖಂಡರ ವಿಷಯದಲ್ಲಿ ಹೀನಾಮಾನವಾಗಿ ಮಾತಾಡಿದ್ದನ್ನು ಖಂಡಿಸಿದ್ದಕ್ಕಾಗಿ ಕೆಲಸದಿಂದ ತೆಗೆದುಹಾಕಲ್ಪಟ್ಟನು.

ಪೂನಾ, ಡಿ 7 — ಮೆಲಿಯಾ ಬರ್ಮಾಗಳಲ್ಲಿ ಶ್ರೀ ಸುಭಾಷರಿದ್ದಾಗ ಅವರ ಪ್ರಾಣಾಪಹರಣ ಪ್ರಯತ್ನ ನಡೆದಿತ್ತೆಂದು ಹೇಳಲಾಗಿದೆ.

ಮದರಾಸು, ಡಿ 8 — ಟ್ರಬಲ್ ಟೋಟಿನಲ್ಲಿ ಯಾವ ಟಿಕೀಟು ವಿಜಯಿಯಾಗದ್ದ್ದರಿಂದ ಶೇಖರಣೆಯಾಗಿದ್ದ ರೂ. 22881 ಮುಂದಕ್ಕೆ ತೆಗೆದುಕೊಳ್ಳಲಾಗಿದೆ.

ಒರಿಸ್ಸದಲ್ಲಿಯು ಡೂಲಿ ಬೆಟ್ಟದಲ್ಲಿ ಅನೆಯು ಮಾಟದ ಕೆತ್ತನೆ ಕೆಲಸವಿವೆ. ಇದ್ದು ಭಾರತದಲ್ಲಿ ಪುರಾತನವಾದದ. ಇದು ಅಶೋಕ ಚಕ್ರವರ್ತಿಯ ಆಜ್ಞೆಯಂತೆ ತಯಾರಿಸಿದದು.

ಅಮೇರಿಕಾದ ಪ್ರಖ್ಯಾತ ಲೇಖಕ ವೇರಿಯರ್ ಕ್ಲಾಫರ್ಡ್ ರೋಂ ನಗರದಲ್ಲಿ ಸಂಸ್ಕೃತ ಭಾಷಾ ಪ್ರವೀಣನಾಗಿ, ಮುಂದಿನ ವಿದ್ಯಾರ್ಜನೆಗೆ ಭಾರತಕ್ಕೆ ಬಂದಿದ್ದು ಅಲಹಾಬಾದ್ ಇಂಡಿಯನ್ ಹೆರಾಲ್ಡ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದನು.

ಕರಾಚಿ, ಡಿ 7 — ಕರಾಚಿಯಲ್ಲಿನ ಅಂಬೇಡ್ಕರರ ಅನುಯಾಯಿಗಳು ಕಾಂಗ್ರೆಸ್ ಸೇರಿದರು.

ಕಲ್ಕತ್ತಾ, ಡಿ 8 — ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯುತ್ತಿದೆ

ಲಂಡನ್, ಡಿ 5 — ಭಾರತಕ್ಕೆ ಬರುವ ಪಾರ್ಲಿಮೆಂಟು ನಿಯೋಗವು ಈ ತಿಂಗಳಲ್ಲಿ ಬ್ರಿಟನ್ನಿನಿಂದ ಹೊರಡುವದು. ಭಾರತ ಮಂತ್ರಿ ಬರುವುದಿಲ್ಲವೆಂದು ಹೇಳಲಾಗಿದೆ.

ಕಲ್ಕತ್ತಾ ಡಿ 6— 1941 ನೇ ಜನವರಿಯಲ್ಲಿ ಶ್ರೀ ಸುಭಾಷಚಂದ ಬೋಸ್ ಬೋಸರು ಮಾಡಿದ ಒಂದು ರಾಜದ್ರೋಹ ಭಾಷಣದ ಮೇಲಿನ ಮೊಕದ್ದಮೆಯು ಮ್ಯಾಜಿಸ್ಟ್ರೇಲ್ ಕೋರ್ಟಿನಲ್ಲಿ ವಿಚಾರಣೆಗೆ ಬಂದು 1946 ನೇ ಮಾರ್ಚಿ 13 ಕ್ಕೆ ಮುಂದರಿಸಲಾಗಿದೆ.

ಕಲ್ಕತ್ತಾದಲ್ಲಿ ರಿಕ್ಷಾ ಎಳೆಯುವವರ ಮುಷ್ಕರ ನಡೆಯುತ್ತಿದೆ. 6 ಸಾವಿರ ರಿಕ್ಷಾಗಳಲ್ಲಿ 25 ಸಾವಿರ ಎಳೆಯುವವರು ಇದರಲ್ಲಿ ಭಾಗವಹಿಸಿದ್ದಾರೆ. ರಿಕ್ಷಾ ಮಾಲೀಕರು ಗಾಡಿ ಎಳೆಯುವವರಿಂದ ದುಬಾರಿ ಹಣ ವಸೂಲಿ ಮಾಡುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಅಬ್ಬಬ್ಬಾ ! ಎಷ್ಟು ಖರ್ಚು ; ನಷ್ಟ

ನ್ಯಾಯವಿಧಾಯಕ ಸಭೆ

(ವಿಶೇಷ ಪ್ರತಿನಿಧಿಯಿಂದ)

ಬೆಂಗಳೂರು ತಾ 8 — 6 ನೇ ದಿವಸದ ಶಾಸನ ಸಭೆಯು ಕಾರ್ಯಕಲಾಪಗಳು ಈ ದಿನ 12 ಘಂಟೆಯಲ್ಲಿ ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸಚಿವರೆಲ್ಲರೂ ಸಭೆಗೆ ಬಂದಿದ್ದರು. ಪ್ರೇಕ್ಷಕರು ಅಧಿಕ ಸಂಖ್ಯಾತರಾಗಿದ್ದರು.

ಪ್ರಶ್ನೋತ್ತರ ಕಾಲದಲ್ಲಿ ಅನೇಕ ವಿಷಯಗಳ ಮೇಲೆ ತೀವ್ರ ಚರ್ಚೆ ನಡೆಯಿತು.

ನ್ಯಾಯವಿಧಾಯಕ ಸಭೆ ಮಂಗಳವಾರದ ದಿವಸ ಬೆಳಿಗ್ಗೆ 9 – 12 ರ ವರೆವಿಗೆ ನಡೆಯುವುದು.

ಲಂಡ್ ಟ್ರೀಡ್ ಕಮಿಷರ್ಷರ ಬಗ್ಗೆ ಬಂದ ನಿಲುವಳಿ ಸೂಚನೆ ವಿರಳವಾಗಿ ಚರ್ಚಿಸಲ್ಪಟ್ಟು ಸರ್ಕಾರಕ್ಕೆ ಸೋಲುಂಟಾಯಿತು.

1942 ನೇ ದುರ್ಘಟನೆಯಲ್ಲಿ ಶಿಕ್ಷೆಯನ್ನು ಹೊಂದಿರುವ ಎಲ್ಲ ಖೈದಿಗಳನ್ನು ಬಿಡಬೇಕೆಂಬ ನಿರ್ಣಯವನ್ನು ಶ್ರೀ ನಾಗಯ್ಯರೆಡ್ಡಿಯವರು ಮಂಡಿಸಿದ್ದನ್ನು ಸದಸ್ಯರನೇಕರು ಪುಷ್ಟೀಕರಿಸಿದರು.

ಶ್ರೀ ಸುಭಾಷರ ಆಜಾದ್ ಫೌಜಿಗೆ ಮೈಸೂರಿನವರೆಷ್ಟು ಮಂದಿ ಸೇರಿದ್ದರೆಂಬುದನ್ನು ಚರ್ಚಿಸಲು ಅಧ್ಯಕ್ಷ ಅಪ್ಪಣೆ ದೊರೆತಾಗ್ಯೂ ದಿವಾನರು ತಳ್ಳಿ ಹಾಕಿದರು.

ಉಡುಪಿಯು ಪಲಿಮಾರು ಪುತ್ತಿಗೆ ಮತ್ತು ಶಿರೂರು ಮಠಾಧೀಶರುಗಳು ಮಣಿಪ್ರಾಲನಲ್ಲಿ ನಡೆಯುವ ಅಖಿಲ ಭಾರತ ಆಯುರ್ವೇದಿ ಕಾಂಗ್ರೆಸಿನ ಸ್ವಾಗತ ಸಮಿತಿಯ ಸದಸ್ಯರಾಗಿ ಪ್ರೋತ್ಸಾಹವನ್ನೀಯುವಂತೆ ತಮ್ಮ ಶಿಷ್ಯವೃಂದಕ್ಕೆ ಆಜ್ಞೆಯನ್ನಿತ್ತಿರುವರು.

ಅಮೇರಿಕಾದಲ್ಲಿ ಲೆಖ್ಖಾಚಾರ

ಈ ಯುದ್ಧದಲ್ಲಿ ಪ್ರಪಂಚಕ್ಕೆ 288500000000 ಪೌಂಡು ಯುದ್ಧ ಸಾಮಗ್ರಿಗಳಿಗೂ ಖರ್ಚಾಗಿವೆಯೆಂದೂ 57728000000 ಪೌಂಡು ನಷ್ಟವಾಗಿದೆಯೆಂದೂ ಅಮೇರಿಕಾ ಲೆಕ್ಕಾಚಾರಸ್ಥರ ಅಭಿಪ್ರಾಯವಾಗಿದೆ.

ಪಂಜಾಬ್

ಐ ಎನ್ ಎ ಜನರಿಗೆ ಕೆಲಸ ಒದಗಿಸಲು ಪಂಜಾಬ್ ಪ್ರಾಂತಿಕ ಕಾಂಗ್ರೆಸಿನ ಕಮಿಟಿ ಸಾಹಸಪಡುತ್ತಿದೆ

ಕಲ್ಕತ್ತಾ

ಕಳೆದ ಶನಿವಾರ ನಡೆದ ಕುದುರೆ ಪಂದ್ಯದಲ್ಲಿ 3 ಟ್ರಿಬಲ್ ಟೋಟ್ ಟೀಕೀಟುಗಳಿಗೆ ತಲಾ ರೂ 17107 ಸಿಕ್ಕಿದೆ

ಬೊಂಬಾಯಿ

ಕಳೆದ ಶನಿವಾರ ನಡೆದ ಕುದುರೆಜೂಜಿನಲ್ಲಿ 26 ಟ್ರಿಬಲ್ ಟೋಟ್ ಟಿಕೀಟಿಗೆ ತಲಾ ರೂ 3213 ದೊರೆತಿವೆ

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 57-4-0
ಚಿನ್ನ ತೊಲ 1 ಕ್ಕೆ	82 8-0
ಬೆಳ್ಳಿ	1-6-0

.....

ಸೂಚನೆ — ನಿನ್ನೆಯ ದಿವಸ ಸುಬ್ಬರಾಯನ ಪಟ್ಟಿ ಪ್ರಯುಕ್ತ ಸತ್ಯವಾಗಿಗೆ ರಜಾ ಕೊಡಲಾಗಿತ್ತು. ವ್ಯಾ. ಸ.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಎಲ್ಲಾ ಬಗೆಯಲ್ಲಿಯೂ ವಿಷಮ ಪರಿಸ್ಥಿತಿಗಳಿಂದ ಕೂಡಿರುವ ವಾರವಿದು. ಜಾಗ್ರತೆ.

ವೃಷಭ— ಸರ್ವತೋಮುಖವಾದ ಆನಂದಪ್ರಾಪ್ತಿಯೋಗವಿದೆ. ಸಂತೋಷ ಪಡಿ.

ಮಿಥುನ — ಉತ್ಪತ್ತಿ ಅಷ್ಟಷ್ಟೇ. ಖರ್ಚು ದುಬಾರಿ. ಕಾರ್ಯಗಳಲ್ಲಿ ಸಾಧಾರಣ ಫಲ ಪ್ರಾಪ್ತಿ.

ಕರ್ಕಾಟಕ— ತೊಂದರೆಗಳ ಮಧ್ಯೆ ಸಿಕ್ಕಿ ಅದಸ್ಥೆಪಡುವ ಯೋಗವಿದೆ. ಏನು ಮಾಡುವುದು ' 'ಅನ್ಯಮನು ಭೊಂಕ್ತ್ಯನ್ಯಂಕೃತಂ ಕರ್ಮ ಶುಭಾಶುಭಂ' ಎಂಬ ಹಿರಿಯರ ನುಡಿಯನ್ನು ಮನದಲ್ಲಿ ನೆಲೆಗೊಳಿಸಿ ಶಾಂತಿಯಿಂದ ವರ್ತಿಸಿ.

ಸಿಂಹ — ಎಲ್ಲ ಬಗೆಗಳಲ್ಲಿ ವಿಷಮ ಪರಿಸ್ಥಿತಿ ವಿಷಮ. ದುಃಖ ಪ್ರಾಪ್ತಿಯೋಗವಿದೆ. ಈಶ್ವರ ಸ್ಮರಣೆ ಮಾಡಿ

ಕನ್ಯ — ವ್ಯಯಾಧಿಕ್ಯಯಿಂದ ಮನಸ್ಸು ಬೇಜಾರಾಗುತ್ತದೆ. ವ್ಯವಹಾರದಲ್ಲಿ ನಿರುತ್ಸಾಹ. ಶರೀರ ಸ್ಥಿತಿ ಸಾಧಾರಣ.

ತುಲ — ಅಲ್ಪ ಸ್ವಲ್ಪ ತೊಂದರೆಗಳು ಆಗಿಂದಾಗ್ಗೆ ಪ್ರಾಪ್ತವಾಗುತ್ತಿದ್ದರೂ ಸುಖ ಸಂತೋಷಗಳೇ ಹೆಚ್ಚು.

ವೃಶ್ಚಿಕ — ಮನೋಸ್ಥೈರ್ಯವಿರುವುದಿಲ್ಲ. ಮನೋಬಲವೃದ್ಧಿಸಲಿಡಿಸುಸಮಯ.

ಧನಸ್ಸು — ಶಾರೀರಕ ವ್ಯವಹಾರಿಕ ವಿಷಯಗಳಿಂದ ಪೀಡೆಯಿದೆ

ಮಕರ — ದೂಷಣೆಗೆ ಬಳಗಾಗುವಿರಿ. ಕೆಟ್ಟಕಾಲವಾದ್ದರಿಂದ ನಮಸ್ಯಹ ಉಪಾಸನೆ ಮಾಡಿ

ಕುಂಭ — ಆರೋಗ್ಯ ಉತ್ತಮವಿದೆ. ಮನೋಸ್ಥಿಮಿತವಿದೆ. ಸ್ನೇಹಿತರೊಂದಿಗೆ ಭೇಟಿ ಸಂಯೋಗವಿದೆ.

ಮೀನ — ಅರ್ಥಕಾರೋಗ್ಯ ಲಾಭ, ಮನೋಶಾಂತಿಯಿದೆ.

ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ
ಶಿವರಾಂಪೇಟೆ ಮೈಸೂರು.

ಜಿಲ್ಲಾ ಸಭೆ

ಮೈಸೂರು ಜಿಲ್ಲಾ ಸಭೆಯ ವಿಶೇಷ ಅಧಿವೇಶನವು ಇದೇ ತಾ ॥ 17 ನೇ ಸೋಮವಾರ 12 ಘಂಟೆಗೆ ಶ್ರೀ ಕೆ. ಸಿ. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡದಲ್ಲಿ ಸೇರುವುದು.

ಅಪೂರ್ವ ದಾಂಪತ್ಯ

ಇಂಗ್ಲೆಂಡಿನಲ್ಲಿ ಎಡ್ವರ್ಡ್‌ಷಿಲ್ಸ್ಟರ್ ಎಂಬಾತನು ಕೆಲವು ಕಾಲದ ಹಿಂದೆ ವೇರಿ ಎಂಬ ಹುಡುಗಿಯನ್ನು ಮದುವೆಯಾಡಿಕೊಂಡನು. ೧೭ ವರ್ಷಗಳ ಹಿಂದೆ ಯಾವುದೋ ಒಂದು ಮನಸ್ತಾಪ ಬಂದು ಜಗಳವಾಡಿಕೊಂಡರು. ಒಂದೇ ಮನೆಯಲ್ಲಿ ಒಂದೇ ಸಂಸಾರದಲ್ಲಿದ್ದರೂ ಅವರು 17 ವರ್ಷಗಳಿಂದ ಮಾತಾಡಿಡವರಲ್ಲ. ಆಗಾಗ್ಗೆ ಒಬ್ಬರಿಗೊಬ್ಬರು ತಮ್ಮ ಮನಸ್ತಾಪ ಸಂಬಂಧವಾದ ಚೀಟಿಗಳನ್ನು ಬರೆದು ಮೇಜಿನ ಮೇಲೆ ಬಿಸುಡು ಹಾಕುವುದೇ ವಿನಃ ಪತ್ನಿಯಾವ ಸಂಪರ್ಕವನ್ನೂ ಅರಿಯರು. ಕಲೆತು ಊಟಮಾಡುವುದನ್ನರಿಯರು. ಕೊನೆಗೆ ಆತನಿಗೆ ಬೇಜಾರಾಗಿ ಹೆಂಡತಿ ತನ್ನನ್ನು ತ್ಯಜಿಸಿರುವಳಾದುದರಿಂದ ಮದುವೆಯನ್ನು ವಿಚ್ಛೇದನ ಮಾಡಬೇಕೆಂದು ಅರ್ಜಿ ಹಾಕಿಕೊಂಡನು. ಜಡ್ಜರವರು 'ಒಂದೇ ಸಂಸಾರದಲ್ಲಿ ವಾಸಮಾಡಿಕೊಂಡಿದ್ದರೂ ಆಕೆಯು ಗಂಡನನ್ನು ತ್ಯಜಿಸಿರುವಳು ಆಕೆಯು ಗಂಡನಿಗೆ ಹೆಂಡತಿಯ ಕೆಲಸವನ್ನೂ ಇದುವರೆಗೂ ಮಾಡಲಿಲ್ಲ' ಎಂದು ತೀರ್ಮಾನವನ್ನು ಮಾಡಿದರು.

ಜಪಾನರಿಂದ ಅಂಡಮಾನಿನಲ್ಲಿ ನೂರಾರು ಕೊಲೆ

ನವದೆಹಲಿ ಡಿ 6 — ನಿಕೊಬಾರ್ ದ್ವೀಪ ನಿವಾಸಿಗಳಾಗಿದ್ದ ನೂರಾರು ಸಂಸಾರಿಗಳನ್ನು ಜಪಾನಿಗಳು ಕೊಲೆ ಮಾಡಿದರು. ಹಲವು ವ್ಯಾಪಾರಿಗಳನ್ನು ಕೊಂದರು. ಕೆಲವು ಅಧಿಕಾರಿಗಳನ್ನು ಖೂನಿಮಾಡಿದರು. 500–700 ನಿಪಾಸಿಗಳನ್ನು ಗೂಢಚಾರರೆಂದು ಹೇಳಿ ಅನ್ನನೀರಿಲ್ಲದೆ ಓಣಗಿಸಿದರು. ಇವರಲ್ಲಿ 14 ಜನ ಮಟ್ಟಿಗೆ ಈಗ ಸಿಕ್ಕಿದ್ದಾರೆ. ಒಂದು ಸಾರಿ 26 ಮಂದಿಯನ್ನು ಸಣ್ಣ ದ್ವೀಪವೊಂದಕ್ಕೆ ಸಾಗಿಸಿ ಗುಂಡಿನಿಂದ ಸುಟ್ಟರು. ಈಚೆಗೆ ಶತ್ರು ನಾಶವಾದ ನೋಲೆ ಈ ಚಿತ್ರ ಹಿಂಸೆಯೆಲ್ಲಾ ನಿಂತಿದೆ. ಪುನರ್ವಜನಾ ಕಾರ್ಯ ಮುಂದುವರಿಯುತ್ತಿದೆ.

ಹಿಟ್ಲರ್, ಮುಸೋಲಿನಿ ಮತ್ತು ಜಪಾನರು ಮಾತ್ರ ನಮ್ಮ ಶತ್ರುಗಳಲ್ಲ, ನಾವು ಹೊರಾಡುವ ಶತ್ರುಗಳಲ್ಲಿ ಬಡತನವೂ ಒಂದು. ಇದರ ನಿರ್ಮೂಲಕ್ಕೆ ಜನರು ಸಹಕರಿಸಬೇಕು — ಎಂದು ಬಾಂಬೆ ಗೌರ್ನರ್ ಅನಂದ್‌ನಲ್ಲಿ ಹೇಳಿದರು.

ಕ್ಯಾಸ್ಪಿಯನ್ ಸಮುದ್ರವನ್ನು 8 ಅಡಿ ಯಷ್ಟು ಎತ್ತರಿಸಬೇಕೆಂದು ರಷ್ಯನರು ಯೋಚಿಸಿರುವರು.

ಕಠಿಣ ಶಿಕ್ಷೆ

ಕರಾಚಿ, ಡಿ 6 — ನೈನರ್ ಹಿಂದೂ ಹುಡುಗಿಯನ್ನು ಅಪಹರಿಸಿ ಅವಳ ಮೇಲೆ ಅತ್ಯಾಚಾರ ಸಡೆಸಿದ ಅಪಾದನೆಗಾಗಿ ಗುಲಾಂ ಹುಸೇನ್ ಫರ್ದಾನ್ ಎಂಬ ಕರಾಚಿ ಕೋಟ್ಯಾಧೀಶ್ವರನಿಗೆ 8 ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಸಕ್ಕರೆ ಅಭಾವ

ಮದ್ರಾಸ್, ಡಿ 6 — ಸಕ್ಕರೆ ಅಭಾವ ಸರಿತೂಗಲು ಇನ್ನು ಮುಂದೆ ಹೋಟಲುಗಳಲ್ಲಿ ಆರು ತರಹ ಸಿಹಿ ತಿಂಡಿಗಿಂತ ಹೆಚ್ಚಾಗಿ ತಯಾರಿಸಬಾರದೆಂದು ಸಿವಿಲ್ ಸಪ್ಲೈ ರಪರ ಅಜ್ಞೆಯಾಗಿದೆ

ಬಾಂಬು ಎಸೆಯಲ್ಪಟ್ಟಿತು!

ಕೈರೊ, ಡಿ 6 — ಮಾಜಿ ಮುಖ್ಯ ಮಂತ್ರಿ ಸಹಾಸ್ ಪಾಶಾರವರ ಕಾರಿನ ಮೇಲೆ ಬಾಂಬು ಎಸೆಯಲ್ಪಟ್ಟಿತು. ಅವರಿಗೆ ದೈವವಶಾತ್ ಅಪಾಯವೇನೂ ಆಗಲಿಲ್ಲ.

ಸೆನ್ಸಾರ್ ಜಾರಿ

ಲಂಡನ್, ಡಿ 7 — ರಷ್ಯಾ ಸರಕಾರವು ಪುನಃ ಹೊರದೇಶದ ಪತ್ರಿಕಾ ಬಾತ್ಮಿದಾರರ ಮೇಲೆ ಸನ್ಸಾರ್ ಜಾರಿ ಮಾಡಿದೆ.

ಯಾಮಾಷೀಟಾಗೆ ಮರಣದಂಡನೆ

ನ್ಯೂಯಾರ್ಕ್, ಡಿ 7 — ಫಿಲಿಪ್ಪೈನ್ಸಿನಲ್ಲಿ ಮಾಜಿ ಜಪಾನ್ ಕಮ್ಯಾಂಡರ್ ಇನ್ ಛೀಫ್ ಆಗಿದ್ದ ವಿಚಾರಣೆಗೊಳಪಡಿಸಲ್ಪಟ್ಟಿರುವ ಜನರಲ್ ಯಾಮಾಷೀಟಾರಿಗೆ ಮರಣದಂಡನೆ ವಿಧಿಸಲಾಗಿದೆ.

ಪತ್ರಿಕಾ ಕಾನೂನು ವಜಾ

ಅಂಕಾರ, ಡಿ 6 — ಟರ್ಕಿಯಲ್ಲಿ ಪತ್ರಿಕಾ ಕಾನೂನು ಕ್ಷೀಪ್ರದಲ್ಲಿಯೇ ವಜಾ ಮಾಡಲಾಗುವುದೆಂದು ಹೇಳಲಾಗಿದೆ

ಆಂಧ್ರ ಶುದ್ಧಿ ಸಂಘದವರು 40 ಮಂದಿ ಕ್ರೈಸ್ತರನ್ನು ಹಿಂದೂ ಮತಕ್ಕೆ ಸೇರಿಸಿಕೊಂಡರು.

ಮಿಡ್ನಾಪುರಕ್ಕೆ ಗಡಿನಾಡು ಗಾಂಧಿ ಮತ್ತು ನೆಹರು ಭೇಟಿ ಕೊಡುವರು.

ಬಾರ್ಡೋಲಿ ಆಶ್ರಮದ ನಷ್ಟ ಪರಿಹಾರಕ್ಕಾಗಿ ಪಟೇಲ್ ಮುಂತಾದವರು ಮುಂಬಯಿ ಸರ್ಕಾರದ ಮೇಲೆ 72600 ರೂ. ಗಳಿಗೆ ದಾವಾ ಹೂಡಿದ್ದಾರೆ.

ಗಾಂಧಿ ವೇವಲ್ ಭೇಟಿಗಾಗಿ ಕಲ್ಕತ್ತಾದಲ್ಲಿ ವ್ಯವಸ್ಥೆಯಾಗುತ್ತಿದೆ.

ಡಾರ್ಡಿನಲ್ಸನ್ನು ವ್ಯಾಪಾರ ನೌಕೆಗಳಿಗೆ ಬಿಟ್ಟುಕೊಡಬೇಕೆಂಬ ಅಮೇರಿಕಾ ಸೂಚನೆಗೆ ಟರ್ಕಿ ಒಪ್ಪಿಗೆಯಿತ್ತು ಸಂಧಾನ ನಡೆಸುತ್ತಿದೆ.

ವಿವಿಧ ವೃತ್ತ

ಬೊಂಬಾಯಿ, ಡಿ 3 — ಬೊಂಬಾಯಿನ ಒಂದು ಪ್ರಖ್ಯಾತ ರಸ್ತೆಗೆ ಸುಭಾಷಚಂದ್ರ ಬೋಸರ ಹೆಸರನ್ನಿಡಬೇಕೆಂಬ ಠರಾವು ಮಂಜೂರಾಯಿತು.

ಂ ಂ

ಕಾಶಿ, ಡಿ 5 — ವಿಜಯ ನಗರಂ ರಾಜಕುಮಾರರು ಕೇಂದ್ರ ಸಭೆಯಲ್ಲಿ ಕಲ್ಕತ್ತಾ ಗೋಳಿಬಾರಿನ ಪ್ರಸಂಗವನ್ನು ಕುರಿತು ಅನಸರದ ಠರಾವನ್ನು ಮಂಡಿಸುವವರಾಗಿರುವರು.

ಂ ಂ

ಅಲಹಾಬಾದ್, ಡಿ 4 — ಮಲೆಯಾದಲ್ಲಿನ ಭಾರತೀಯರ ಸ್ಥಿತಿಗತಿಗಳನ್ನು ಕುರಿತು ಪಂ || ನೆಹರುರವರು ಭಾರತ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಂ ಂ

ಕಾರ್‌ವಾರ್, ಡಿ 4 — ಕಲೆಕ್ಟರ್ ಆಫೀಸಿನಲ್ಲಿ ಕೆಲಸದಲ್ಲಿರುವ ಸ್ತ್ರೀ ಕಾರಕೂನಳೊಬ್ಬಳು ನವೆಂಬರ್ 5 ರಲ್ಲಿ ಅಜಾದ್ ಹಿಂದ್ ಫೌಜಿನ ದಿನಾಚರಣೆಯ ಮೆರವಣಿಗೆಯಲ್ಲಿ ಭಾಗವಹಿಸಿದ್ದಕ್ಕಾಗಿ ಕೆಲಸದಿಂದ ತೆಗೆಯಲ್ಪಟ್ಟಳು.

ಂ ಂ

ಹೈದರಾಬಾದ್, ಡಿ 2 — ಲಂಚತನ ಪತ್ತುಗಳ ಮೊಕದ್ದಮೆಯನ್ನು ವಿಚಾರಿಸಲು ಬೇರೊಂದು ನ್ಯಾಯಾಸ್ಥಾನವನ್ನು ಸ್ಥಾಪಿಸಲಾಗಿದೆ.

ಂ ಂ

ಐ ಎನ್.ಎ. ಡಿಫೆನ್ಸ್ ಸಮಿತಿಯವರು ತಮ್ಮ ತಂದೇ ವಿಳಾಸವನ್ನು 'ಜೈ ಹಿಂದ್' ಎಂದು ರಿಜಿಸ್ಟರ್ ಮಾಡಿಸಿಕೊಂಡಿರುವರು.

ಂ ಂ

ಲಂಡನ್, ಡಿ 4 — ಲಾರ್ಡ್ ಹಾಹಾರವರ ಅಪೀಲು ಲಾರ್ಡ್ಸ್ ಸಭೆಯಲ್ಲಿ ವಿಚಾರಣೆಗೆ ಬರಲಿದೆ.

ಂ ಂ

ಲಂಡನ್, ಡಿ 4 — ಭಾರತಕ್ಕೆ ಶೀಘ್ರದಲ್ಲಿಯೇ ಪಾರ್ಲಿಮೆಂಟಿನ ಪ್ರತಿನಿಧ್ಯವು ಹೋಗಿ ಅಲ್ಲಿಯ ನಾಯಕರೊಡನೆ ಮಾತುಕತೆ ನಡೆಸಿ, ಭಾರತೀಯರು ತಮ್ಮ ಭವಿಷ್ಯವನ್ನು ನಿರ್ಧರಿಸಲು ರಚನಾ ಸಮಿತಿಯೊಂದನ್ನು ಸ್ಥಾಪಿಸಲಾಗುವುದೆಂದು ಭಾರತ ಮಂತ್ರಿ ಲಾರ್ಡ್ಸ್ ಸಭೆಯಲ್ಲಿ ತಿಳಿಸಿರುವರು.

ಬೊಂಬಾಯಿ, ಡಿ 3 — ಕಲ್ಕತ್ತಾದಲ್ಲಿಯ ಗುಂಡು ಹಾರಿಸಿದ ಪ್ರಕರಣದಲ್ಲಿ ವಿದ್ಯಾರ್ಥಿಗಳು ಮೌಲಾನ ಆಜಾದರು ಪಂ || ನೆಹರು ಮುಂತಾದ ಮುಖಂಡರಿಗೆ ತಿಳಿಸಲು ಬಂದ ತಂತೀವಾರ್ತೆಗಳನ್ನು ಟೆಲಿಗ್ರಾಫ್ ಆಫೀಸಿನವರು ಸ್ವೀಕರಿಸಲಿಲ್ಲವೆಂದು ತಿಳಿಯಬಂದಿದೆ.

ಂ ಂ

ಲಂಡನ್, ಡಿ 3 — 27 ವರ್ಷ ವಯಸ್ಸಿನ ಮಹಮದ್ ಅಜಾಲಿ ಮುಜಂದಾರ್ ಎಂಬ ಹೋಟಲ್ ಕೆಲಸಗಾರನು 15 ವರ್ಷ ವಯಸ್ಸಿನ ವೇಲ್ಸ್ ಹುಡುಗಿಯನ್ನು ತಾನೇ ಪೌರೋಹಿತ್ಯವನ್ನು ತಾನೇ ನಡೆಸಿ, ಮದುವೆಯಾದನೆಂದು ಅವನ ಮೇಲೆ ಬಂದಿದ್ದ ಮೊಕದ್ದಮೆಯಲ್ಲಿ 18 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ಂ ಂ

ರಂಗೂನ್, ಡಿ 3 — ರಂಗೂನ್ ಜೈಲಿನಲ್ಲಿ 1200 ಮಂದಿ ಐ ಎನ್.ಎ ಖೈದಿಗಳು ಇರುವರೆಂದು ಗೊತ್ತಾಗಿದೆ.

ಂ ಂ

ಕಲ್ಕತ್ತಾ, ಡಿ 3 — ಖಾದಿ ಬಟ್ಟೆ ಧರಿಸಿದ್ದಕ್ಕಾಗಿ ಎರಡು ಯುರೋಪ್ಯೂ ವಿಯಾ ಹೋಟಲುಗಳಲ್ಲಿ ಭಾರತ ಪತ್ರಿಕೋದ್ಯೋಗಿಗಳನ್ನು ಸೇರಿಸಲಿಲ್ಲ.

ಂ ಂ

ಮದರಾಸು, ಡಿ 4 — ಕಂಚಿ ಮುನಿಸಿಪಾಲಿಟಿಗೆ ಗಾಜಿನ ಸಾಮಾನು, ಟೀ ಪು ಮುಂತಾದುವನ್ನು ಅಧಿಕ ಬೆಲೆಗೆ ಮಾರಿದ ಅಪಾದನೆಯ ಮೇಲೆ ಮದರಾಸಿ ಒಂದು ವ್ಯಾಪಾರ ಸಂಸ್ಥೆಯ ಪಾಲುಗಾರರಾದ ಅಬ್ದುಲ್ಲ ಭಾಯ್ ಮತ್ತು ಸೈಫುದ್ದೀನ್ ಎಂಬುವರಿಗೆ ತಲಾ ರೂ. 200 ಜುಲ್ಮಾನೆಯಾಯಿತು.

ಂ ಂ

ಬಟೇವಿಯಾ, ಡಿ 4 — ಡೊಮಿನಿಯನ್ ಸ್ಟೆಟ್ಸ್‌ನಿಂದ ನಮಗೆ ಸಂತೃಪ್ತಿಯಿಲ್ಲವೆಂದೂ, ನಮಗೆ ಅದು ಬೇಡವೆಂದೂ ಇಂಡೋನೇಷ್ಯಾ ಮುಖ್ಯಮಂತ್ರಿ ಡಾ || ಪೆರಿಯರ್ ಡಚ್ಚರಿಗೆ ತಿಳಿಸಿದ್ದಾರೆ.

ಂ ಂ

ಲಂಡನ್, ಡಿ 5 — ಮುಸ್ಲಿಂ ಲೀಗಾಣಿಸಲು ಪ್ರೆ || ಟ್ಯೂಮನ್ಸರು ರಚಿಸಿರುವ ಯೋಜನೆಯನ್ನು ಅಮೇರಿಕಾ ಕೈಗಾರಿಕಾ ಕಾಂಗ್ರೆಸಿನವರು ತಿರಸ್ಕರಿಸಿರುವರು.

ವಾರ್ತಾತರಂಗ

ಕಲ್ಕತ್ತಾ ಡಿ 2— ಮೈಮನ್ಸಿಂಗಿನಲ್ಲಿ ಸರ್ ಫಜಲಾವಿ ಮತ್ತು ಇತರ ಸ್ವತಂತ್ರ ಉಮೇದುವಾರರ ಮೇಲೆ ಮುಸ್ಲಿಂ ಲೀಗಿನವರ ಹಾವಳಿ ಮತ್ತು ಪಾಕಿಸ್ಥಾನದ ಗಲಾಟೆ ಜೋರಾಗಿದೆಯೆಂದು ಶ್ರೀ ನಿಯೋಗಿಯವರು ಶ್ರೀ ಶರತ್ ಚಂದ್ರ ಬೋಸರಿಗೆ ತಂತೀವಾರ್ತೆ ಕಳುಹಿಸಿದಾರೆ.

೦ ೦ ೦ ೦

ನಾಗಪುರ ಡಿ 1— ನಾಗಪುರ ಟೈಮ್ಸ್ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರು ಶುಕ್ಲರು ರೂ. 4500 ಹೊಸದಾಗಿ ಡಿಪಾಜಿಟ್ ಮಾಡಿ ಡಿಕ್ಲರೇಷ್ ಕೊಟ್ಟಿರುವರು. ಈ ಪತ್ರಿಕೆ ಸಂಬಂಧದಲ್ಲಿ 4 ಸಾರಿ ಡಿವಾಜಿಟ್ಟುಗಳು ಒಟ್ಟು ರೂ. 12250 ಸರಕಾರದ ಬೊಕ್ಕಸಕ್ಕೆ ಸೇರಿದೆ.

೦ ೦ ೦ ೦

ಝಾನ್ಸಿ ಡಿ 1— ಇಲ್ಲಿಯ ಮುನಿಸಿಪಾಲಿಟಿಯ ಗುಡಿಸುವವರಿಗೆ ಅವರು ಕೇಳಿರುವ ತುಟ್ಟಿಭತ್ಯ. ಹೆರಿಗೆ ರಜಾ ಮುಂತಾದುವನ್ನು ಮುನಿಸಿಪಾಲಿಟಿಯವರು ಏರ್ಪಡಿಸಿಕೊಡದಿದ್ದಲ್ಲಿ ಡಿಸೆಂಬರ್ 20 ರಿಂದ ಮುಷ್ಕರ ಹಿಡಿಯುವರೆಂದು ಹೇಳಲಾಗಿದೆ.

೦ ೦ ೦ ೦

ಬನ್‌ಬಜ್ಜಿನಲ್ಲಿ ಒಂದು ಮನೆಯವರು ಬೆಂಕಿ ಕಾಯಿಸಿಕೊಳ್ಳುತ್ತಿದ್ದಾಗ ಅಗ್ನಿಯಲ್ಲಿ ಸ್ಫೋಟವಾಗಿ ಒಬ್ಬನು ಸತ್ತನು. ಕೆಲವರಿಗೆ ಗಾಯವಾಯಿತು.

೦ ೦ ೦ ೦

ಈಜಿಪ್ಟಿನ ಸರಕಾರವು 1945–46 ನೇ ಸಾಲಿನ ಹತ್ತಿ ಬೆಳೆಗೆ ಹಣ ಒದಗಿಸಲು 30000000 ಪೌಂಡಿನ ಸಾಲ ಎತ್ತುವರಾಗಿರುವರು.

೦ ೦ ೦ ೦

ಕೈರೋ ಡಿ 2— ಯಹೂದಿಗಳ ಪದಾರ್ಥಗಳನ್ನು ಬಹಿಷ್ಕರಿಸಲು ಅರಬ್ ಕೌನ್ಸಿಲ್ ತೀರ್ಮಾನಮಾಡಿದೆ.

೦ ೦ ೦ ೦

ಕನ್ನಾನೂರು ಡಿ 1— ಪಯನ್ನೂರು ಹೈಸ್ಕೂಲಿನ ಹೆಡ್‌ಮಾಸ್ಟರು ಅಲ್ಲಿಯ 23 ವಿದ್ಯಾರ್ಥಿಗಳು ಕಲ್ಕತ್ತಾ ಗುಂಡಿನೇಟಿನ ಪ್ರಕರಣದಲ್ಲಿ ಖಂಡನಾದಿನಾಚರಣೆಯನ್ನು ನಡೆಸಿದ್ದಕ್ಕಾಗಿ 5 ದಿನ ಸಸ್ಪೆಂಡ್ ಮಾಡಿದರು.

೦ ೦ ೦ ೦

ಮಾಸ್ಕೋ ಡಿ 2— ತ್ರಿಮೂರ್ತಿಗಳ ಭೇಟಿಯು ಅಮೇರಿಕಾದಲ್ಲಿ ನಡೆಯಬಹುದೆಂದೂ, ಸ್ಟಾಲಿನ್ನರು ಅಲ್ಲಿಗೆ ಹೋಗಬಹುದೆಂದೂ ಹೇಳಲಾಗಿದೆ.

೦ ೦ ೦ ೦

ಲಂಡನ್ ಡಿ 2– ಮರಣದಂಡನೆ ವಿಧಿಸಲಾಗಿರುವ ಜಾರ್ಜ್ ಅಮೆರಿಯು ಕ್ಷಯ ರೋಗ ಪೀಡಿತನಾಗಿದ್ದು ಫಾಸಿ ಶಿಕ್ಷೆಗೆ ಲಾಯಕ್ಕಾದಷ್ಟು ಆರೋಗ್ಯವೂ ಶಕ್ತಿಯೂ ಇಲ್ಲದಿರುವದರಿಂದ ನೇಣುಹಾಕಲ್ಪಡಲಾರನೆಂದು ಹೇಳಲಾಗಿದೆ.

೦ ೦ ೦ ೦

ಬೆಂಗಳೂರು ಡಿ 3— ಶ್ರೀ ಕೆ. ಹನುಮಂತಯ್ಯನವರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ಕರೆತರಲಾಗಿದೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಕಲ್ಕತ್ತಾ ಡಿ 2— ಎಲ್ಗಿನ್ ರೋಡನ್ನು 'ನೇತಾಜಿ ಸುಭಾಷ ಚಂದ್ರ ಅವಿನ್ಯೂ' ಎಂದು ಕರೆಯಬೇಕೆಂದು ತಾ॥ 5 ರಲ್ಲಿ ನಡೆಯುವ ಕಾರ್ಪೊರೇಷನ್ ವಿಾಟಿಂಗಿಗೆ ಶ್ರೀ ಕವಿರಾಜ ಸತ್ಯವ್ರತ ಸೆನ್ನ ಒಂದು ತಾವು ಕಳಿಸಿದ್ದಾರೆ.

೦ ೦

ಜಬ್ಬಲ್ಪುರ ಡಿ 3 — ಬಂದಲ್ಕಂಡಿನ ಮೆಹಿಯಾರ್ ಸಂಸ್ಥಾನದ ರಾಜರು ತಮ್ಮ ಸಂಸ್ಥಾನದ ದೇವಾಲಯವನ್ನು ಹರಿಜನರಿಗೂ ತೆರೆದಿದ್ದಾರೆ. ಅಲ್ಲದೆ ಅವರೇ ಹರಿಜನರೊಡನೆ ದೇವಾಲಯಕ್ಕೆ ಪ್ರವೇಶಿಸಿ, ಆವರ ಜೊತೆಯಲ್ಲೇ ಪ್ರಸಾದ ಸ್ವೀಕರಿಸಿದರು.

೦ ೦

ಕಲ್ಕತ್ತಾ, ಡಿ 3 — ಗಾಂಧೀಜೀರವರು ಈ ದಿವಸ ಮೌನವ್ರತಾಚರಿಸಬೇಕಾದ ದಿವಸವಾಗಿರುವುದರಿಂದ ತಮ್ಮ ವ್ರತಕ್ಕೆ ಭಂಗಬಂದುಕೊಳ್ಳದಂತೆ ಬಂಗಾಳ ಗೌರ್ನರ್ ಮಿ॥ ಕೇಸಿಯರೊಡನೆ ಬರವಣಿಗೆ ವ್ಯವಹಾರ ನಡೆಸಿದರು.

೦ ೦

ಮದರಾಸು, ಡಿ 4 — ಕನ್ನಡ ಸಾಹಿತ್ಯ ಪರಿಷತ್ತಿನ 29 ನೇ ಅಧಿವೇಶನವು ಪ್ರಥಮ ಭಾರಿ ಇಲ್ಲಿ ಈ ತಿಂಗಳು 26 27 ಮತ್ತು 29 ರಲ್ಲಿ ನಡೆಯುವುದು ಡಾ॥ ಯು. ರಾಮರಾಯರು ಸ್ವಾಗತ ಸಮಿತಿ ಅಧ್ಯಕ್ಷರಾಗಿಯೂ, ಶ್ರೀ ಟಿ.ಪಿ. ಕೈಲಾಸಂ ಅಧಿವೇಶನಾಧ್ಯಕ್ಷರಾಗಿಯು ಇರುವರು. ಇಲ್ಲಿನ ಸಮ್ಮೇಳನ ಕಾಲದಲ್ಲಿ ಸಹಾಯ ಮಾಡಲು ಸ್ಥಳೀಯ ಶಾಲಾ ಕಾಲೇಜುಗಳ ಕನ್ನಡಿಗರ ಸ್ವಯಂ ಸೇವಕದಳ ಸ್ಥಾಪನೆಯಾಗಿದೆ.

೦ ೦

ವಾರ್ಧ ಡಿ 4 — ಗಾಂಧೀಜೀಯವರ ಹರಿಜನ ಮುಂದಿನ ತಿಂಗಳಿಂದ ಪಕ್ಷವಾಗುವುದು.

೦ ೦

ಏಷಿಯಾ ಜನರಿಗಾಗಿ ಇಡಲಾಗಿದ್ದ 41 ಮ್ಯುನಿಸಿಪಲ್ ಸೈಟುಗಳ ಹರಾಜು ನಡೆಯಿತು. ಭಾರತೀಯರು ಅದನ್ನು ಬಹಿಷ್ಕರಿಸಿದರು. ಈ ಸೈಟುಗಳಿಗೆ ಸಂಬಂಧಿಸಿದ ಷರತ್ತುಗಳು ಜನಾಂಗ ಪ್ರತ್ಯೇಕವಿಡುವಂಥಾದ್ದಾಗಿದ್ದವು.

೦ ೦

ವಾಷಿಂಗ್ಟನ್, ಡಿ 3 — ಜಪಾನಿನ ಮೇಲೆ ಅಣು ಬಾಂಬು ಉಪಯೋಗಿಸುವಂತೆ ಅಧ್ಯಕ್ಷ ಟ್ರೂಮನ್‌ರೇ ನಿರ್ಧರಿಸಲ್ಪಟ್ಟಿದ್ದರೆಂದು ಸಂಯುಕ್ತ ಸಂಸ್ಥಾನದ ರಸಾಯನ ಶಾಸ್ತ್ರಜ್ಞ ಡಾ॥ ವೆನ್ಸರರು ಹೇಳಿದ್ದಾರೆ.

ಅಮೇರಿಕದ ಯುದ್ಧಯತ್ನ

ಈ ಯುದ್ಧದಲ್ಲಿ ಅಮೇರಿಕವು ತಯಾರಿಸಿದ ಶಸ್ತ್ರಾಸ್ತ್ರಗಳೇ ಮೊದಲಾದುದಕ ವಿವರವನ್ನು, ಅಲ್ಲಿಯ ಯುದ್ಧ ಉತ್ಪತ್ತಿ ಮಂಡಲದವರು ಪ್ರಕಟಿಸಿರುವರ: (1) ಬಾಂಬರ್ ವಿಮಾನಗಳು 97000 (2) ಇತರ ಮಿಲಟರಿ ವಿಮಾನಗಳು 200000 (3) ಯುದ್ಧ ಹಡಗುಗಳು 71060 (4)ಟ್ಯಾಂಕುಗಳು 86388 (5) ಟ್ರಕ್ಕುಗಳು 2435000 (6) ರೈಫಲುಗಳು 174000000 (7) ಬಂದಕು ತೋಟಿಗಳು 41000000000 (8) ಕಾಲ್ಚೀಲಗಳು 250000000 ಜೋಡಿ (9) ಅರಳೆ ಬಟ್ಟೆಯ ಚಲ್ಲಣಗಳು 275000000 (10) ಉಣ್ಣೆಯ ಕಂಬಳಿಗಳು 4327 000 – ಹೀಗಿದ್ದರೂ, ಪ್ರಜೆಗಳಿಗೆ ಯಾವ ಆನಾನುಕೂಲತೆಯೂ ಇರಲಿಲ್ಲ. ಅಮೇರಿಕಾದಲ್ಲಿ ತಯಾರಾಗುತ್ತಿದ್ದ ಎಲ್ಲ ವಸ್ತುಗಳಲ್ಲಿ ಸೇಕಡ 40 ಕ್ಕಿಂತ ಹೆಚ್ಚಿಗಿನದು ಯುದ್ಧಕ್ಕೆ ಉಪಯೋಗಿಸಲ್ಪಟ್ಟಿಲ್ಲ [ಪ್ರ

ಆಟಂ ರಹಸ್ಯ — ರಷ್ಯಾ ವಶವೇ !

ವಾಷಿಂಗ್ಟನ್, ಡಿ 4 — ಹಸ್ಪ್ಪೆಸ್ಸಿನವರು 'ರಷ್ಯಾ ಬಾಂಬಿನ ಗೂಢಾಚಾರನು' ಈ ದೇಶದಲ್ಲಿ ಕೆಲಸ ಮಾಡುತ್ತಿದ್ದು ಅಮೇರಿಕಾ ಉತ್ಕೃಷ್ಟ ಶಸ್ತ್ರಾಸ್ತ್ರಗಳ ಮೇಲೆ ಬಹು ರಹಸ್ಯ ವಿಚಾರಗಳನ್ನು ಪಡೆದಿದ್ದಾನೆಂದು ಹೊರಪಡಿಸಿರುವುದು ಸರಕಾರಕ್ಕೆ ದಿಗ್ಭ್ರಮೆಯಾಗಿದೆ —ಕಲ್ಕತ್ತಾ, ಡಿ 4 — ಸೋದಾಪುರ ಆಶ್ರಮದಲ್ಲಿ ಗಾಂಧೀಜೀ ನಡೆಸಿದ ಪ್ರಾರ್ಥನೆಗೆ 10000 ಮಂದಿ ಬಂದಿದ್ದರು.

ಮುಷ್ಕರವಾಗಬಹುದು ?

ಕೆ. ಜಿ. ಎಫ್, ಡಿ 5 — ಚಿನ್ನದ ಗಣಿ ಕೆಲಸಗಾರರು ಕಳುಹಿಸಿದ್ದ ಬೇಡಿಕೆಗಳು ಫಲಕಾರಿಯಾಗಿಲ್ಲವೆಂದೂ ಕೆಲಸಗಾರರು ಮುಷ್ಕರ ಹಿಡಿಯುವ ಸಂಭವವಿದೆಯೆಂದೂ ತಿಳಿಯುಬಂದಿದೆ.

ವಾಷಿಂಗ್ಟನ್ ಡಿ 3 — ಪರ್ಷಿಯದಿಂದ ಹೊರದೇಶ ಸೈನ್ಯಗಳು ವಾಪಸಾಗಬೇಕೆಂಬ ಅಮೇರಿಕಾ ಮನವಿಗೆ ರಷ್ಯಾ ಅದು ಆಗುವುದಿಲ್ಲವೆಂದು ಉತ್ತರ ಕೊಟ್ಟಿದೆ. ಬ್ರಿಟಿಸರ ಉತ್ತರ ಇನ್ನೂ ಬಂದಿಲ್ಲ

೦ ೦

ಕಲ್ಕತ್ತಾ, ಡಿ 4 — 60 ವರ್ಷದ ಕುರುಡ ಮುದುಕಿ ಹರಿಜನ ನಿಧಿಗೆ 8 ಆಣೆ ಕೊಟ್ಟು ಕಣ್ಣಿಲ್ಲದಿದ್ದರೂ ಮನುಷ್ಯಾಕಾರದ ದೇವರನ್ನು ಕಂಡೆ ಎಂದಾಗ ಗಾಂಧೀಜೀ ಅವಳನ್ನು ಆಶೀರ್ವದಿಸಿದರು.

AT Opera— From 8-12-45

JITTERBUGS

with Laural & Hardy

Morning Shows From 7-12-45 — Immortal Sergeant

At Ranjit 2 nd Week

BANSARI

ಚಾರ್ಲಿ — ಈಶ್ವರಲಾಲ್ — ಷಮೋಮ್ — ದೀಕ್ಷಿತ್ — ಕೇಸರಿ
ಮುಂತಾದವರು ಪಾತ್ರವಹಿಸಿರುವ

ಬನ್ಸರಿ

ಪ್ರತಿ ತಿಸ 3 ಆಟಗಳು .... (ಹಿಂದಿ ಚಿತ್ರ)

ಅಕ್ಕ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

For Good Printing
L. N. Press
Sriramp et MYSORE

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನ್ನಾಹನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

No. R I- 60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಗೋಡೌನ್ ಲೈಸೆನ್ಸ್ ಪಡೆದ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಸಹಾ 1945 ನೇ ಡಿಸೆಂಬರು ಮಾಹೆ 16 ನೇ ತಾರೀಖು ಭಾನುವಾರ ಮಧ್ಯಾಹ್ನ ಮೊಹರಂ ಹಬ್ಬದ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಟಿ.. ವಿ. ರೆಡ್ಡಿ
1-12-45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಸತ್ಯವಾದಿ
ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಸಮುದ್ರ ತೀರಕ್ಕೆ ಹೋಗಲು ಅಪ್ಪಣೆ

ನವದೆಹಲಿ ಡಿ 6— ಯುದ್ಧಕಾಲದಲ್ಲಿ ಸಮುದ್ರ ಬೊಂಬಾಯಿ ತೀರಕ್ಕೆ ಯಾರೂ ಬರಕೂಡದೆಂದು ನಿರ್ಬಂಧವಿತ್ತು. ಈಗ ಸರ್ವರಿಗೂ ಅಲ್ಲಿಗೆ ಹೋಗಲು ಅವಕಾಶವಿದೆ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ. ವಿಳಾಸ— ಶಕ್ತಿ ಸುಧಾ, ೧೦೬೭ ಚಾಮರಾಜಪುರಂ, ಮೈಸೂರು.